ಪಿ. ಡಬ್ಲು 1

ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ದಿನಾಂಕಃ 26-08-2022.

**ಪಾಟೀಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಎಮ್.ಎಲ್.ಎನ್ (ಬಿ)ವಕೀಲರಿಂದ,**

ನನ್ನ ಗಂಡ ಸುಬ್ಬಾ ಪೋಲಿಸು ಇಲಾಖೆಯಲ್ಲಿ ಎಎಸ್ಐ ಆಗಿ ಮುರ್ಡೇಶ್ವರ ಠಾಣೆಯಲ್ಲಿ ಕೆಲಸ ಮಾಡುತ್ತಾರೆ. ನನ್ನ ಗಂಡನ ಮೂಲತಃ ಮನೆ ಶಿರಾಲಿಯ ಬೇಂಗ್ರೆ ಗ್ರಾಮ ಇರುತ್ತದೆ. ನಾನು ನನ್ನ ಗಂಡನೊಂದಿಗೆ ಒಟ್ಟಿಗೆ ವಾಸ ಮಾಡುತ್ತೇನೆ. ನಾವು ನಮ್ಮ ತಂದೆಯ ಊರಾದ ಬಲ್ಸೆ ಗ್ರಾಮದ ಗದ್ದೆಯಲ್ಲಿರುವ ಮನೆಯಲ್ಲಿ ವಾಸ ಮಾಡುತ್ತೇವೆ. ಗೋಕರ್ಣದಲ್ಲಿ ಸುಮಾರು 10 ವರ್ಷ ವಾಸ ಮಾಡಿದ್ದೆವು. ನನ್ನ ಗಂಡನಿಗೆ 6 ತಿಂಗಳ ಹಿಂದೆ ಮುರ್ಡೇಶ್ವರ ಠಾಣೆಗೆ ವರ್ಗಾವಣೆಯಾಗಿ ಬಂದಿದ್ದೆವು. ಬಲ್ಸೆ ಗ್ರಾಮದಲ್ಲಿ 4 ವರ್ಷಗಳಿಂದ ವಾಸ ಮಾಡುತ್ತಿದ್ದೇವೆ. ನನ್ನ ಗಂಡ ಮುರ್ಡೇಶ್ವರ ಠಾಣೆಯಲ್ಲಿ ಕೆಲಸ ಮಾಡುತ್ತಿದ್ದು ಬಲ್ಸೆ ಗ್ರಾಮದ ಮನೆಗೆ ಹೋಗಿ ಬಂದು ಮಾಡುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಾನು ವಾಸಿಸುವ ಮನೆಯ ಗೋಕರ್ಣದ ವಿಳಾಸ ನೀಡಿದ್ದೆವು ಎಂದರೆ ಸರಿ. ಸಾಕ್ಷಿ ಮುಂದುವರಿದು ನನ್ನ ಗಂಡ ನೌಕರಿಯಲ್ಲಿ 5 ವರ್ಷಗಳಿಗೊಮ್ಮೆ ವರ್ಗಾವಣೆಯಾಗುತ್ತಿದ್ದು ಪದೇ ಪದೇ ವಿಳಾಸ ಬದಲಾವಣೆ ಮಾಡಲು ತೊಂದರೆಯಾಗುತ್ತದೆ ಎಂದು ಹಳೆಯ ವಿಳಾಸ ಬದಲಾವಣೆ ಮಾಡಿಲ್ಲ ಎಂದು ನುಡಿಯುತ್ತಾರೆ.

ನಾನು ಎಸ್.ಎಸ್.ಎಲ್.ಸಿ .ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಎಎಸ್ಐ ಯವರ ಹೆಂಡತಿಯಾಗಿರುವುದರಿಂದ ನನಗೆ ಸಾಮಾನ್ಯ ಜ್ಞಾನ ಇದೆ ಎಂದರೆ ಸರಿ. 1 ನೇ ವಾದಿ ಗಣಪಯ್ಯ ಸಣ್‌ಬಲ್ಸೆ ಮತ್ತು 1 ನೇ ಪ್ರತಿವಾದಿ ಭಾಗೀರತಿ ಬಲ್ಸೆ ಗ್ರಾಮದ ಕ್ರಿಶ್ಚಿಯನ್ ಕೇರಿಯಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸರಿ. ಕ್ರಿಶ್ಚಿಯನ್ ಕೇರಿಗೆ ಗೋವೆ ಹಿತ್ತಲು ಎಂದೂ ಕರೆಯುತ್ತಾರೆ ಎಂದರೆ ಸರಿ. ಸಣ್‌ಬಲ್ಸೆ ಮತ್ತು ಬಲ್ಸೆ ಗ್ರಾಮದ ಕ್ರಿಶ್ಚಿಯನ್ ಕೇರಿ ಬೇರೆ ಬೇರೆ ಬಜರೆ ಎಂದರೆ ಸರಿ. ಸಣ್‌ಬಲ್ಸೆ ಮತ್ತು ಬಲ್ಸೆ ಗ್ರಾಮದ ಕ್ರಿಶ್ಚಿಯನ್ ಕೇರಿಯು ಸುಮಾರು 10 ಕಿ.ಮೀ ಅಂತರದಲ್ಲಿದೆ ಎಂದರೆ ಸಾಕ್ಷಿಯು 5-6 ಕಿ.ಮೀ ದೂರದಲ್ಲಿದೆ ಎಂದು ನುಡಿಯುತ್ತಾರೆ. 1 ನೇ ವಾದಿ ಗಣಪಯ್ಯ ಅವರ ಅಜ್ಜನ ಹೆಸರು ಗಣಪಯ್ಯ ಇರುತ್ತದೆ. ಕುಪ್ಪಯ್ಯನ ಮಕ್ಕಳು ಗಣಪಯ್ಯ ಮತ್ತು ಕೊಗ್ಗ ಇಬ್ಬರೂ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಗಣಪಯ್ಯ ಮತ್ತು ಕೊಗ್ಗ ಇವರ ನಡುವೆ 1974 ರಲ್ಲಿ ಮೌಖಿಕವಾಗಿ ಆಸ್ತಿಯಲ್ಲಿ ಭಾಗ ಆಗಿದ್ದವು ಎಂದರೆ ಸರಿಯಲ್ಲ. ಸದರಿ ಮೌಖಿಕ ಪಾಲು ಪ್ರಕಾರ ಉಪಭೋಗ ಮಾಡಿಕೊಂಡು ಬರುತ್ತಿದ್ದರು ಎಂದರೆ ಸರಿಯಲ್ಲ.

ನನ್ನ ವಾದ ಪತ್ರ ಮತ್ತು ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಪ್ಯಾರಾ ನಂ.5 ರಲ್ಲಿ 1 ನೇ ಪ್ರತಿವಾದಿಯ ಗಂಡ ಕೊಗ್ಗ ದಿ.08-07-1974 ರಲ್ಲಿ ಮರಣ ಹೊಂದಿದ್ದಾನೆ ಎಂದು ಹೇಳಲಾಗಿದೆ ಎಂದರೆ ಸರಿ. ಅದೇ ರೀತಿ ನನ್ನ ವಾದ ಪತ್ರ ಮತ್ತು ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಪ್ಯಾರಾ ನಂ.10 ರಲ್ಲಿ ನನ್ನ ತಂದೆಯ ಹಿರಿಯಣ್ಣ ಮೃತ ಕೊಗ್ಗ ಕುಪ್ಪಯ್ಯ ದೇವಾಡಿಗ ದಿ.14-04-1978 ರಂದು ಮೃತ ಹೊಂದಿದ್ದಾನೆ ಎಂದು ಹೇಳಲಾಗಿದೆ ಎಂದರೆ ಸರಿ. ಸದರಿ ಸಾಕ್ಷಿಗೆ ವಾದ ಪತ್ರ ಮತ್ತು ಮುಖ್ಯ ವಿಚಾರಣೆಯ ಪತ್ರದಲ್ಲಿ ಕೊಗ್ಗ ಈತನ ಎರಡು ಮರಣ ದಿನಾಂಕ ನಮೂದಿಸಲಾಗಿದೆ, ಅದರಲ್ಲಿ ಯಾವುದು ಸರಿ ಎಂದು ಕೇಳಿದಾಗ ಸಾಕ್ಷಿಯು ನನಗೆ ಸರಿಯಾಗಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಪ್ರಕರಣದ ಸಂಪೂರ್ಣ ಇರುವುದಕ್ಕೆ ಸಾಕ್ಷಿ ನುಡಿಯುತ್ತಿದ್ದೇನೆ. ಕೊಗ್ಗ ಮತ್ತು ಗಣಪಯ್ಯ ಇವರ ನಡುವೆ ಆದ ಪಾಲು ಆದ ಬಗ್ಗೆ ನನಗೆ ಯಾವುದೇ ವಿಚಾರ ಗೊತ್ತಿಲ್ಲ ಎಂದರೆ ಸರಿಯಲ್ಲ.

ಆಸ್ತಿಯಲ್ಲಿ ದುರುದ್ದೇಶದಿಂದ ಪಾಲು ಪಡೆಯುವ ಉದ್ದೇಶದಿಂದ ಪಾಲು ಆಗಿದ್ದರೂ ಪಾಲು ಆಗಿಲ್ಲ ಎಂದು ಸುಳ್ಳು ಹೇಳಿ ಪಾಲು ಪಡೆಯುವುದಕ್ಕಾಗಿ ಈ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. 1 ನೇ ವಾದಿ ನಾನು ಹೇಳಿದಂತೆ ದಾವಾ ಸ್ವತ್ತಿನಲ್ಲಿ ಯಾವತ್ತೂ ಸ್ವಾಧೀನ ಇರಲಿಲ್ಲ ಎಂದರೆ ಸರಿಯಲ್ಲ. 1 ನೇ ವಾದಿಯ ತಂದೆ ಮತ್ತು 1 ನೇ ಪ್ರತಿವಾದಿಯ ಮಾವ ಕುಪ್ಪಯ್ಯ ಎಂದಿಗೂ ಎಲ್ಲಾ ದಾವಾ ಆಸ್ತಿಗಳಲ್ಲಿ ಸ್ವಾಧೀನ ಇರಲಿಲ್ಲ ಎಂದರೆ ಸರಿಯಲ್ಲ. ಕುಪ್ಪಯ್ಯ ದೇವಾಡಿಗ ಕೆಲವೊಂದು ಸರ್ವೆ ಜಮೀನುಗಳಲ್ಲಿ ಮಾತ್ರ ಸ್ವಾಧೀನ ಇದ್ದರು ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಕುಪ್ಪಯ್ಯನಿಂದ ಬಂದ ಆಸ್ತಿಗಳು ಅಲ್ಲ ಎಂದರೆ ಸರಿಯಲ್ಲ. 1 ನೇ ವಾದಿ ಮತ್ತು 1 ನೇ ಪ್ರತಿವಾದಿಯ ಗಂಡನ ನಡುವೆ 1974 ರಲ್ಲಿ ಮೌಖಿಕ ವಿಭಾಗ ಆಗಿ ಸ್ವಾಧೀನ ಹೊಂದಿ ಅದರಂತೆ ಕಂದಾಯ ದಾಖಲೆಗಳಲ್ಲಿ ಅವರ ಹೆಸರು ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಸದರಿ ಮೌಖಿಕ ವಿಭಾಗದಂತೆ ಕಂದಾಯ ಕಾಯ್ದೆಯಂತೆ ಭೂ ನ್ಯಾಯ ಮಂಡಳಿಯ ಮುಂದೆ ಅರ್ಜಿ ನಮೂನೆ-7 ನ್ನು ತುಂಬಿ ಪ್ರತ್ಯೇಕವಾಗಿ ಖಾತೆ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ.

ಸದರಿ ಅರ್ಜಿ ನಮೂನೆ-7 ರಂತೆ ಭೂ ನ್ಯಾಯ ಮಂಡಳಿಯವರು ಸದರಿಯವರಿಗೆ ಪ್ರತ್ಯೇಕವಾಗಿ ಸ್ವಾಧೀನ ಹಕ್ಕು ನೀಡಲಾಗಿರುತ್ತದೆ ಎಂದರೆ ಸರಿಯಲ್ಲ. ಭೂ ನ್ಯಾಯ ಮಂಡಳಿಯವರು ಸದರಿಯವರು ಪ್ರತ್ಯೇಕ ಸ್ವಾಧೀನ ಇದ್ದ ಬಗ್ಗೆ ಪರಿಶೀಲನೆ ಮಾಡಿ ನೀಡಿ ಸ್ವಾಧೀನ ಹಕ್ಕು ನೀಡಿದ್ದಾರೆ ಎಂದರೆ ಸರಿಯಲ್ಲ. ಕೊಗ್ಗ ಈತನಿಗೆ ಭೂ ಸ್ವಾಧೀನ ನ್ಯಾಯ ಮಂಡಳಿ

ಎಲ್ ಆರ್ ಎಂ-21/464 ಬೈಲೂರು ಗ್ರಾಮ ದಿ.31-12-1978 ರಂತೆ ಸ್ವಾಧೀನ ಹಕ್ಕು ನೀಡಲಾಗಿದೆ ಎಂದರೆ ಸರಿಯಲ್ಲ. ಕೊಗ್ಗ ಮತ್ತು ಗಣಪಯ್ಯ ಇವರ ನಡುವೆ ಮೌಖಿಕ ವಿಭಾಗ ಖಾತ್ರಿ ಮಾಡಿಕೊಂಡು ಭೂ ನ್ಯಾಯ ಮಂಡಳಿ ಮೇಲಿನಂತೆ ಆದೇಶ ಮಾಡಲಾಗಿದೆ ಎಂದರೆ ಸರಿಯಲ್ಲ.

ಭೂ ನ್ಯಾಯ ಮಂಡಳಿಯ ಮುಂದೆ ಪ್ರಕರಣ ವಿಚಾರಣಾ ಚಾಲ್ತಿಯಲ್ಲಿರುವಾಗ ಕೊಗ್ಗ ಮರಣ ಹೊಂದಿದ್ದು, ಆ ಸ್ಥಳದಲ್ಲಿ 1 ನೇ ಪ್ರತಿವಾದಿ ಸದರಿ ಪ್ರಕರಣವನ್ನು ಮುಂದುವರಿಸಿಕೊಂಡು ಬಂದು ಅದರಂತೆ ಅವರಿಗೆ ಸ್ವಾಧೀನ ಹಕ್ಕು ನೀಡಲಾಗಿದೆ ಎಂದರೆ ಸರಿಯಲ್ಲ. ಸದರಿ ಆದೇಶದಂತೆ ಈಗ 1 ನೇ ಪ್ರತಿವಾದಿ ಅವರಿಗೆ ಬಂದ ಪಾಲು ಆಸ್ತಿಯಲ್ಲಿ ಸ್ವಾಧೀನ ಹೊಂದಿ ಉಪಭೋಗ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ವಾದಿ ಮತ್ತು 1 ನೇ ಪ್ರತಿವಾದಿ ಮತ್ತು ಇತಳ ಗಂಡ ಕೊಗ್ಗ ಪಾಲು ಪಟ್ಟಿಯಂತೆ ಈ ದಿನಗಳವರೆಗೆ ಸ್ವಾಧೀನ ಹೊಂದಿ ಉಪಭೋಗ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ಆನಂತರ ಸದರಿಯವರು ಭೂ ನ್ಯಾಯ ಮಂಡಳಿಯ ಆದೇಶದಂತೆ ಸ್ವಾಧೀನ ಹೊಂದಿ ಉಪಭೋಗ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ ಗಣಪಯ್ಯ ವಾದಿ ಯವತ್ತೂ 1 ನೇ ಪ್ರತಿವಾದಿಯ ಗಂಡ ಕೊಗ್ಗ ಈತನೊಂದಿಗೆ ಯಾವತ್ತೂ ದಾವಾ ಸ್ವತ್ತಿನಲ್ಲಿ ಜಂಟಿಯಾಗಿ ಸ್ವಾಧೀನ ಇರಲಿಲ್ಲ ಎಂದರೆ ಸರಿಯಲ್ಲ. ವಾದಿಗೆ ತನಗೆ ಹಕ್ಕು ಮಂಜೂರಾದ ಮಾತ್ರ ಆಸ್ತಿಯಲ್ಲಿ ಸ್ವಾಧೀನ ಇದ್ದರು ಎಂದರೆ ಸರಿಯಲ್ಲ.

ಈಗ ತೋರಿಸುತ್ತಿರುವ ದಾಖಲೆ ನನ್ನ ತಂದೆಗೆ ಅಂದರೆ ವಾದಿಗೆ ಭೂ ನ್ಯಾಯ ಮಂಡಳಿಯವರ ಹಕ್ಕು ನೀಡಿದ ಆದೇಶದ ಪ್ರತಿ ಅಂದರೆ ಸರಿಯಲ್ಲ.

ಈ ಹಂತದಲ್ಲಿ ಮಾನ್ಯ ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗಾಗಿ ಸಮಯ ಕೋರಿದ್ದು ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.